ಶಿವಗಂಗೆಯನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಲು ಕೈಗೊಂಡ ಕ್ರಮ

1085 (1461) ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1990-91ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕು. ಸೋಂಪುರ ಹೋಬಳಿಗೆ ಸೇರಿದ ಶಿವಗಂಗೆಯನ್ನು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು ಮದುರೆ ಹೋಬಳಿ ಕನಸವಾಡಿಯಲ್ಲಿರುವ ಶ್ರೀ ಶನಿಮಹಾತ್ಮ ದೇವಸ್ಥಾನವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡಬೇಕೆಂದು ಸೂಚನೆ ಬಂದಿರುವುದು ನಿಜವೇ ?

2) ಹಾಗಿದ್ದಲ್ಲಿ ಸರಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :

1) ಹೌದು

2) ಶಿವಗಂಗೆ ಕ್ಷೇತ್ರ ಹಾಗೂ ಕನಸವಾಡಿಯನ್ನು ಪ್ರೇಕ್ಷಣೀಯ ಸ್ಥಳವೆಂದು ಸರ್ಕಾರ ಗುರುತಿಸಿದೆ.

ಪ್ರವಾಸೋದ್ಯಮ ಇಲಾಖೆಗೆ ಒದಗಿಸಲಾಗುವ ಅನುದಾನದ ಅವಲಂಬನೆ ಮೇಲೆ ಪ್ರೇಕ್ಷಣೀಯ ಸ್ಥಳಗಳಲ್ಲಿ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

ಯಾದಗಿರಿ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತೊಂದರೆಗೊಳಗಾಗಿರುವ ಹಳ್ಳಿಗಳು.

1089 (1866) ಶ್ರೀ ಎ. ಬಿ. ಮಲಕರೆಡ್ಡಿ (ಯಾದಗಿರಿ) ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಯಾದಗಿರಿ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳು ಕುಡಿಯುವ ನೀರಿನ ಅಭಾವ ಹೊಂದಿದೆ?

2) ಹಾಗಿದ್ದಲ್ಲಿ ಕುಡಿಯುವ ನೀರಿನ ಅಭಾವ ನೀಗಿಸಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) 9 ಹಳ್ಳಿಗಳು : ಜನವಸತಿಗಳು

2) ಹೆಚ್ಚುವರಿ ಕೊಳವೆ ಬಾವಿಗಳನ್ನು ಬರಪೀಡಿತ ಗ್ರಾಮಗಳಲ್ಲಿ : ಜನವಸತಿಗಳಲ್ಲಿ ಕೊರೆಯಲು ಬರಪರಿಹಾರದ ಕಾರ್ಯಕ್ರಮದ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

ಮೇಹುಂಡಿ ಹಳ್ಳದ ಪ್ರವಾಹದಿಂದ ರಸ್ತೆ ಸಂಚಾರ ಬಂದ್.

1090 (1613) ಶ್ರೀ ಕೆ. ಪೆಚ್ . ಕುರಡಗಿ (ಮುಂಡರಗಿ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?